# ನೀಲಿನೋಕಗಿನ ಮಂಜು

■ ಡಾ. ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ

## ಕತೆಯಿಲ್ಲದ ಕತೆ ಕತೆಯಾದ ಕತೆ



“ಅದು ತುಂಬಾ ಕಾನ್ಫಿಡೆನ್ಶಿಯಲ್ ಶೆಟ್ಟರೇ. ಆರು ತಿಂಗಳ ಹಿಂದೆ ಈ ವಿಚ್ಛೇದನ ಪ್ರಕರಣ ಪ್ರಾರಂಭವಾಗುವ ಸಂದರ್ಭದಲ್ಲಿ ಜಯಂತಿ ನನಗೆ ಒಂದು ಪತ್ರ ಬರೆದು – ‘ನಾನು ಬಹಳ ದೊಡ್ಡ ದುರಂತ ಇದಿರಿಸಲು ಸಿದ್ಧಳಾಗಬೇಕಾಗಿದೆ ಸರ್. ನನ್ನ ಮಗಳು ತನ್ನ ಗಂಡನಿಗೆ ವಿಚ್ಛೇದನ ಕೊಡುತ್ತಿದ್ದೇನೆ ಎಂದು ನನ್ನ ಮನೆಗೆ ಬಂದು ರಂಪಾಟ ಮಾಡುತ್ತಿದ್ದಾಳೆ. ಯಾಕೆ? ಏನು? ಎಂದು ಕೇಳಿದರೆ ಏನೂ ಹೇಳುತ್ತಿಲ್ಲ. ಆಕೆಗೆ ನಾನು, ಅಳಿಯಂದಿರನ್ನು ಕರೆಸಿ ಕೇಳುತ್ತೇನೆ. ಅವರು ತಪ್ಪು ಮಾಡಿದ್ದರೆ ಬುದ್ಧಿ ಹೇಳುತ್ತೇನೆ ಅಥವಾ ಅವರನ್ನು ಕ್ಷಮಿಸಿದ್ದೇನೆ ಎನ್ನುತ್ತೇನೆ ಎಂದರೆ, ಇವಳು ಕೇಳುವುದೇ ಇಲ್ಲ. ಆಕೆ ಹೇಳುವುದು ಒಂದೇ. ‘ಅವರನ್ನು ನೀವು ಕರೆಸುವುದೂ ಬೇಡ, ಅವರಿಗೆ ಬುದ್ಧಿ ಹೇಳುವುದೂ ಬೇಡ’ ಎಂದೇ! ಆದರೆ ನಾನು ಬೆನ್ನು ಬಿಡದೆ ಯಾಕೆ ಎಂದು ಮೇಲಿಂದ ಮೇಲೆ ಒತ್ತಾಯಿಸಿ ಕೇಳಿದ ಮೇಲೆ ನನ್ನನ್ನು ಅಪ್ಪಿಕೊಂಡು ಬಿಕ್ಕಳಿಸಿದ ಅವಳು ‘ಅಮ್ಮಾ ಅವರು ಗಂಡಸೇ ಅಲ್ಲ, ಅಂಥವರ ಜೊತೆ ನಾನು ಯಾಕೆ ಸಂಸಾರ ಮಾಡಬೇಕು? ಅಥವಾ ಹೇಗೆ ಬದುಕುವುದು ಹೇಳು?’ ಎಂದಾಗ ನಾನು ನೆಲಕ್ಕೇ ಕುಸಿದುಹೋಗಿದ್ದೆ. ಆಮೇಲೆ ಆಕೆಯನ್ನು ವಿಚಾರಿಸಿ, ಆಕೆಯ ನಿರ್ಧಾರ ಸರಿ ಎಂದು ವಿಚ್ಛೇದನಕ್ಕೆ ಒಪ್ಪಿಗೆ ಕೊಟ್ಟೆ.

ನಮ್ಮ ದುರದೃಷ್ಟ ಎಂಬಂತೆ ನಮ್ಮ ಕಡೆಯಿಂದ ವಕೀಲಿಕೆಗೆ ಪ್ರಸಿದ್ಧರಾದ ಯಾವ ವಕೀಲರೂ ಮುಂದೆ ಬರುತ್ತಿಲ್ಲ. ಯಾಕೆಂದರೆ ನಮ್ಮ ಅಳಿಯಂದಿರು ಶಿವಪುರ ಬಾರ್ ಕೌನ್ಸಿಲ್‌ನ ಅಧ್ಯಕ್ಷರಾಗಿರುವ ಹಾಗೇ ರೋಟರಿ ಕ್ಲಬ್‌ನ ಪ್ರೆಸಿಡೆಂಟ್ ಕೂಡಾ ಆಗಿದ್ದಾರೆ. ಅಷ್ಟೇ ಅಲ್ಲ, ‘ಸರಸ್ವತಿ ಎಜುಕೇಶನ್ ಟ್ರಸ್ಟ್’ ಎಂಬ ಸಂಸ್ಥೆಯ ಗೌರವಾಧ್ಯಕ್ಷ ಇತ್ಯಾದಿ ಸಂಸ್ಥೆಗಳಲ್ಲಿದ್ದು ಸಮಾಜದಲ್ಲಿ ದೊಡ್ಡ ರೀತಿಯಲ್ಲಿ ಅವರು ಗುರುತಿಸಲ್ಪಟ್ಟಿದ್ದಾರೆ. ಇಷ್ಟಕ್ಕೂ ಅವರು ಡೈವೋರ್ಸ್ ಕೊಡಲಿಕ್ಕೆ ಇಚ್ಛೆ ಇಲ್ಲದೆ ‘ನನ್ನ ಮಗಳಿಗೆ ‘ನೀನು ನಮ್ಮ ಮನೆಯಲ್ಲೇ ಇರು’ ಅನ್ನುತ್ತಾರಂತೆ. ಅದಕ್ಕೆ ಆಕೆ ಒಪ್ಪದಿದ್ದಾಗ, ಬೇಕಾದರೆ ಬೇರೆ ಮನೆ ಮಾಡಿ ವಾಸಿಸು ಎನ್ನುತ್ತಾರಂತೆ. ಅವರಿಗೆ ಕೈ ಹಿಡಿದ ಹೆಂಡತಿಗೆ ದೈಹಿಕ ಅಥವಾ ಮಾನಸಿಕ ಸುಖ ನೀಡಲಿಕ್ಕಾಗದಿದ್ದರೂ ಸಮಾಜದಲ್ಲಿ ಸ್ವಪ್ರತಿಷ್ಠೆಯನ್ನು ಉಳಿಸಿಕೊಳ್ಳುವ ಹುಚ್ಚಿದೆ. ಹೆಣ್ಣಿನ ದೇಹದ ಮೇಲೆ ಯಜಮಾನಿಕೆಯನ್ನು ಸ್ಥಾಪಿಸುವ ಹಟವಿದೆ’’ ಎಂದು ಜಯಂತಿ ಹಿಂದೊಮ್ಮೆ ನನಗೆ ಬರೆದಿದ್ದರು ಎಂದು ಹೇಳಿದ ರಾಯರು, ‘ನಾನು ರಾಂಪುರಕ್ಕೆ ಹೋದರೆ ಜಯಂತಿಗೆ ಹೆಲ್ಪ್ ಆಗುತ್ತದೆ ಅಂತ ಅಲ್ಲ. ಬಟ್ ನೈತಿಕವಾಗಿ ಅವಳಿಗೆ ಬೆಂಬಲ ನೀಡುವವರು ಬೇಕಲ್ಲ ಎನ್ನುವುದು ಅವಳ ಆಸೆ. ಇಷ್ಟಕ್ಕೂ ಅವಳ ಮಗಳು ಇರುವುದು ಶಿವಪುರದಲ್ಲಿ. ಅದು ಸುಮಾರಾಗಿ ರಾಂಪುರದಿಂದ ಅರುವತ್ತು ಎಪ್ಪತ್ತು ಕಿ.ಮೀ. ದೂರದಲ್ಲಿರುವ ಊರು. ಅಷ್ಟೇ ಅಲ್ಲ, ಅದು ತಾಲ್ಲೂಕು ಕೇಂದ್ರ ಮತ್ತು ವೆಲ್ ಡೆವಲಪ್ಡ್ ಟೌನ್. ಅಲ್ಲಿನ ಒಂದೆರಡು ಕಾಲೇಜುಗಳ ಮೇಷ್ಟ್ರುಗಳೆಲ್ಲ ನನಗೆ ಗೊತ್ತು. ಆಯುಷಿ ಅಧ್ಯಾಪಕಿಯಾಗಿರುವ ಅಲ್ಲಿನ ಪಿ.ಯು. ಕಾಲೇಜಿನ ಪ್ರಾಂಶುಪಾಲರು ನನ್ನ ಹಳೆವಿದ್ಯಾರ್ಥಿ. ಇದನ್ನೆಲ್ಲ ಇಟ್ಟುಕೊಂಡು ಆಕೆ ನನ್ನ ನೆರವು ಪಡೆಯಬೇಕು ಎಂದು ಸಂಕಲ್ಪಿಸಿರಬಹುದು’ ಎಂದರು.

ಶೆಟ್ಟರು ‘ಸರಿ ರಾಯರೇ, ಹಾಗಾದರೆ ನೀವು ಖಂಡಿತ ಹೋಗಿ ಬರಬೇಕು. ಇಲ್ಲಿ ಸರೋಜಕ್ಕ ಒಬ್ಬಳೇ ಅಂತ ನಿಮಗೆ ಸ್ವಲ್ಪ ಆತಂಕ ಇರಬಹುದು. ಆದರೆ ನಮ್ಮ ಮನೆಗೆ ಸೇಸಿ ಎಂಬ ಐವತ್ತು ಅರುವತ್ತು ವರುಷದ ಹೆಂಗಸೊಬ್ಬಳು ಕೆಲಸಕ್ಕೆ ದಿನಾ ಬರುತ್ತಾಳೆ. ಅವಳನ್ನು ದಿನಾ ರಾತ್ರೆ ಸರೋಜಕ್ಕನಿಗೆ ಕಂಪೆನಿ ಕೊಡಲು ಹೇಳುತ್ತೇನೆ. ನಾನಂತೂ ಬೆಳಗ್ಗೆ ಸಂಜೆ ನಿಮ್ಮ ಮನೆಗೆ ಹೋಗಿ ಅಕ್ಕನನ್ನು ವಿಚಾರಿಸುತ್ತೇನೆ. ನೀವೂ ಅಷ್ಟೇ – ಒಂದು ಮಾತನ್ನು ಎಸ್.ಐ. ಶಿವರಾಮ ಶೆಟ್ಟರಿಗೆ ಹೇಳಿದರೆ ಮುಗಿಯಿತು, ಅವರು ರಾತ್ರೆ ಹೊತ್ತು ಯಾರನ್ನಾದರೂ ರೌಂಡ್ಸ್‌ಗೆ ಕಳುಹಿಸಬಹುದು’